ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

1. ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ಒಂದು ವಂಶವೃಕ್ಷವನ್ನು ನಿಪಿ-1 ಎಂದು, 5 ಪಹಣಿ ಪತ್ರಿಕೆಗಳನ್ನು ನಿಪಿ-2 ರಿಂದ ನಿಪಿ-6 ಎಂದು, ಎರಡು ಎಂ ಆರ್ ಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಒಂದು ಡಿಮ್ಯಾಂಡ್ ರಿಜಿಸ್ಟರ್ ವಹಿಯನ್ನು ನಿಪಿ-9 ಎಂದು, 3 ಕಂದಾಯದ ರಶೀದಿಗಳನ್ನು ನಿಪಿ-10 ರಿಂದ ನಿಪಿ-12 ಎಂದು, ಒಂದು ನೋಟಿಸನ್ನು ನಿಪಿ-13 ಎಂದು, ಜವಾಬು ನೋಟಿಸನ್ನು ನಿಪಿ-14 ಎಂದು, ಅಂಚೆ ರಶೀದಿಗಳನ್ನು ನಿಪಿ-15 ಎಂದು, 3 ಅಂಚೆ ದೃಢೀಕರಣ ಪತ್ರಗಳನ್ನು ನಿಪಿ-16 ರಿಂದ ನಿಪಿ-18 ಎಂದು, ಜಾರಿಯಾಗದೆ ವಾಪಸ್ಸು ಬಂದಿರುವ 2 ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಪಿ-19 ಮತ್ತು ನಿಪಿ-20 ಎಂದು ಗುರುತಿಸಿ, ಇವುಗಳನ್ನು ತೆರೆದು ನೋಡಲಾಗುತ್ತಿದ್ದು, ಇವುಗಳಲ್ಲಿ ಇರುವ ನೋಟಿಸಿನ ನಕಲುಗಳನ್ನು ನಿಪಿ-19(ಎ) ಮತ್ತು ನಿಪಿ-20(ಎ) ಎಂದು ಗುರುತಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ ವಿ ಎಲ್ ವಕೀಲರಿಂದ

ಹಾಜರಿದ್ದು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎಂ. ಅನಿತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.